ಒಂದರ ಮುಖ್ಯಸ್ಥನಾಗಿದ್ದ. ಎಂತೆಂಥವರೆಲ್ಲ ತನ್ನ ಕ್ಯಾಮರಾ ಕೈಚಳಕದಿಂದ ಪ್ರಸಿದ್ಧ ಮಾಡೆಲ್‌ಗಳಾದರು, ಹಾಲಿವುಡ್ಡಿಗೆ ಎಂಟ್ರಿ ಪಡೆದರು ಎಂಬುದನ್ನೆಲ್ಲಾ ವಿವರಿಸಿದ. ನಾನು ಅಲ್ಲಿಯೇ ಆತನ ಹೆಸರನ್ನು ಗೂಗಲ್ ಮಾಡಿ, ಆತ ಹೇಳುತ್ತಿರುವುದು ನಿಜವಿರಬಹುದೇ ಎಂದು ಮೊಬೈಲಿನಲ್ಲಿ ಪರೀಕ್ಷಿಸತೊಡಗಿದೆ. ಆತನೇ ಮುಂದಾಗಿ, 'ವಾರೆಂಟ್ ಸಾಟ್' ಎನ್ನುವ ತನ್ನ ಹೆಸರಿನ ಸ್ಪೆಲ್ಲಿಂಗನ್ನು ಬಿಡಿಬಿಡಿಯಾಗಿ ಉಚ್ಚರಿಸುತ್ತ ಟೈಪಿಸಲು ಸಹಾಯ ಮಾಡಿದ.

ಆತ ನ್ಯೂಯಾರ್ಕ್ ಪತ್ರಿಕೆಯೊಂದರ ಕ್ರಿಯೇಟಿವ್ ಡೈರೆಕ್ಟರ್ ಎನ್ನುವ ಮಾಹಿತಿಯೊಂದಿಗೆ, ಅನೇಕ ಮಾಡೆಲ್ಲುಗಳ ಪಟದ ಜೊತೆಗೆ ಆತನ ಹತ್ತಾರು ಫೋಟೊಗಳನ್ನೂ ಗೂಗಲ್ ಹೆಕ್ಕಿ ಕೊಟ್ಟಿತು. ಭುಜದಿಂದ ಇಳಿಬಿದ್ದು ಸೊಂಟದವರೆಗೂ ಚಾಚಿರುವ ನೀಳ ಕೇಶರಾಶಿಯನ್ನು ಹೊರತುಪಡಿಸಿದರೆ ಆತ ಈತನೇ ಎಂಬುದು ಖಚಿತವಾಯಿತು ನನಗೆ.

'ಆಗ ಉದ್ದ ಕೂದಲು ಬಿಟ್ಟಿದ್ದೆ. ಈಗ ಇದಷ್ಟೇ ಇದೆ' ಎಂದು ತನ್ನ ಪೋನಿ ಟೇಲನ್ನು ಅಲ್ಲಾಡಿಸುತ್ತ ಮುಗುಳ್ನಕ್ಕ. ತಾನು ಆತುಕೊಂಡು ನಿಂತಿರುವ ಪೋರ್ಷೆ ಕಾರಿನ ಫೋಟೊವನ್ನು ನನ್ನೆದುರಿಗೆ ಹಿಡಿದು,

'ಇಂಥ ಮೂರು ಕಾರುಗಳಿದ್ದವು ನನ್ನಲ್ಲಿ. ಅವನ್ನೆಲ್ಲ ತ್ಯಜಿಸಿ ಬಂದು, ಈಗ ಸ್ವದೇಶದಲ್ಲಿ ಅಂಡಲೆಯುತ್ತ ಆರಾಮದಲ್ಲಿದೇನೆ' ಎಂಬುದಾಗಿ ಹೇಳಿದ.

* * *

ಆತನ ಕಥೆಯನ್ನು ಸಂಕ್ಷಿಪ್ತವಾಗಿ ಹೇಳಿಬಿಡುತ್ತೇನೆ. ವಾರೆಂಟ್ ಸಾಟ್‌ನಿಗೆ ಚಿಕ್ಕಂದಿನಿಂದಲೂ ಫೋಟೋಗ್ರಫಿ ಹುಚ್ಚು. ಬ್ಯಾಂಕಾಕ್ ಯೂನಿವರ್ಸಿಟಿಯಲ್ಲಿ ಅದೇ ವಿಷಯದಲ್ಲಿ ವ್ಯಾಸಂಗ ಮಾಡುತ್ತಿದ್ದ ಅವನನ್ನು ಯು.ಎಸ್. ಆರ್ಮಿಯವರು ಕ್ಯಾಂಪಸ್ ರಿಕ್ರೂಟ್ ಮಾಡಿ ಸೀದಾ ತೆಗೆದುಕೊಂಡು ಹೋಗಿ ಬಿಟ್ಟದ್ದು ವಿಯೆಟ್ನಾಂ ಯುದ್ಧಭೂಮಿಯಲ್ಲಿ. 1969ನೇ ಇಸ್ವಿಯಂತೆ ಅದು. ಈತನಿಗಾಗ ಇಪ್ಪತ್ತು ವರ್ಷ. ಅಲ್ಲಿ ಅವನ ಕೆಲಸವೂ ವಿಚಿತ್ರವಾಗಿತ್ತು. ಹಾರುತ್ತಿರುವ ಹೆಲಿಕಾಪ್ಟರಿನಲ್ಲಿ ಕುಳಿತು ಕಿಟಕಿಯಿಂದ ಕೆಳಕ್ಕೆ ಬಗ್ಗಿ ಕೈಲಿರುವ ಕ್ಯಾಮರಾದಿಂದ ಭೂಮಿಯ ಫೋಟೊವನ್ನು ತೆಗೆಯುವುದು. ಒಂದೆರಡು ಫೋಟೊವಲ್ಲ, ಹಾರಾಡುತ್ತಿರುವ ಅಷ್ಟೂ ಸಮಯ ಕೈ ಅಲುಗದಂತೆ ಗಟ್ಟಿಯಾಗಿ ಹಿಡಿದು ಚಕಚಕಚಕನೆ ಫೋಟೊ ತೆಗೆಯುತ್ತಲೇ ಇರಬೇಕು. ನಂತರ ಡಾರ್ಕ್ ರೂಮಿನಲ್ಲಿ ಆ ಫೋಟೊಗಳನ್ನೆಲ್ಲ ಡೆವಲಪ್ ಮಾಡಿ, ಸರಿಯಿರುವುದನ್ನು ಆಯ್ದು, ಹೊಂದಿಸಿ, ಆಯಾ ಭೂಪ್ರದೇಶದ ನಕಾಶೆ ಸಿದ್ಧಪಡಿಸಬೇಕು. ಆ ಭೂಪಟವನ್ನು ನೋಡಿಯೇ ಸೈನ್ಯಾಧಿಕಾರಿಗಳು ಮರುದಿನ ಯಾವ ಸ್ಥಳದಲ್ಲಿ ಬಾಂಬ್ ಹಾಕಬೇಕೆಂದು ನಿಶ್ಚಯಿಸುತ್ತಿದ್ದರು. (ವೈರಿ ದೇಶದ ನಿರ್ದಿಷ್ಟ ಭಾಗದ ಕರಾರುವಾಕ್ ನಕಾಶೆ ಪಡೆಯಲು ಇವತ್ತಿಗಿರುವ ಟೆಕ್ನಾಲಜಿಗಳು ಅಂದು ಲಭ್ಯವಿರಲಿಲ್ಲವಷ್ಟೇ). ಈತ ಅದೆಷ್ಟು ಚಾಕಚಕ್ಯತೆಯಿಂದ ಫೋಟೊಗಳನ್ನು ಕ್ಲಿಕ್ಕಿಸುತ್ತಾನೆ, ಅದೆಷ್ಟು ಬುದ್ಧಿವಂತಿಕೆಯಿಂದ ಅವನ್ನೆಲ್ಲ ಹೊಂದಿಸಿ ಭೂಪಟ ಸಿದ್ಧಪಡಿಸುತ್ತಾನೆ ಎಂಬುದರ ಮೇಲೆ, ಅಮೆರಿಕನ್ ಸೈನ್ಯ ವಿಯೆಟ್ನಾಂ ನೆಲದ ಮೇಲೆ ಮಾಡುವ ಹಾನಿಯ ಪ್ರಮಾಣ ನಿರ್ಧರಿತವಾಗುತ್ತಿತ್ತು.

ಹೀಗೊಮ್ಮೆ, ವಿಯೆಟ್ನಾಮಿ ಸೈನಿಕರು ನೆಲದಿಂದ ಮೇಲಕ್ಕೆ ಹೆಲಿಕಾಪ್ಟರಿನತ್ತ ಹಾರಿಸಿದ ಗುಂಡು ವಾರೆಂಟ್ ಸಾಟ್‌ನ ಕತ್ತಿನ ಪಕ್ಕದಲ್ಲೇ ತೂರಿ ಕಿವಿಯನ್ನು ಸವರಿ ಹೋಗಿ, ಈತ ಗಾಯಗೊಂಡ. ಮಿಲಟರಿ ಕ್ಯಾಂಪು, ಅನಂತರ ಬ್ಯಾಂಕಾಕಿನ ದೊಡ್ಡ ಆಸ್ಪತ್ರೆಗಳಲ್ಲೆಲ್ಲ ಚಿಕಿತ್ಸೆ ಪಡೆದು ಗುಣಮುಖನೂ ಆದ. ನಂತರ ಅವನಿಗೆ ಅಮೆರಿಕದ ವೀಸಾ ದೊರೆತು, ಸೈನ್ಯದಿಂದ ನಿವೃತ್ತಿ ಪಡೆದು ತನ್ನ ಮೆಚ್ಚಿನ ಫೋಟೊಗ್ರಾಫಿ ಕ್ಷೇತ್ರದಲ್ಲೇ ಮುಂದರಿದು, ನ್ಯೂಯಾರ್ಕಿನ ಪ್ರತಿಷ್ಠಿತ ಫ್ಯಾಷನ್ ಮ್ಯಾಗಜಿನ್ನಿನ ಮುಖ್ಯಸ್ಥನಾಗಿ, ಗ್ಲಾಮರ್ ಲೋಕದಲ್ಲಿ ಮಿಂಚಿ, ಹಣ ಕೀರ್ತಿಯನ್ನೆಲ್ಲ ದಂಡಿಯಾಗಿ ಸಂಪಾದಿಸಿದ. ತನ್ನ ಹರಿದ ಕಿವಿಯನ್ನು ಮುಚ್ಚಿಡಲೋಸ್ಕರವೇ ಉದ್ದ ಕೂದಲು ಬೆಳೆಸಿಕೊಂಡಿದ್ದ ಎಂಬುದು ಆತನದೇ ಸಮಜಾಯಿಷಿ.

ಅಷ್ಟೆಲ್ಲಾ ಇದ್ದವ, ಐಷಾರಾಮಿ ಲೋಕದಲ್ಲಿ ಮುಳುಗಿದ್ದವ ಈಗೇಕೆ ಈ ರೀತಿ ತನ್ನ ಹರಕು ಕಿವಿ ತೋರಿಸಿಕೊಂಡು, ಮಾಸಿದ ದೊಗಲು ಬಟ್ಟೆ ಧರಿಸಿ, ಥಾಯ್ಲೆಂಡಿನ ಮೃಗಾಲಯಗಳಲ್ಲಿ ಅಲೆದಾಡುತ್ತಿದ್ದಾನೆ ಎನ್ನುವ ಪ್ರಶ್ನೆ ಮೂಡುತ್ತಿರುವಂತೆ ಆತನ ಕಥೆಯ ಉತ್ತರಾರ್ಧ ತೆರೆದುಕೊಳ್ಳುತ್ತದೆ.

'ಹಣ ದಂಡಿಯಾಗಿ ಸಿಕ್ಕಮೇಲೆ ಅದನ್ನು ಖರ್ಚು ಮಾಡಲು ಮತ್ತೇನಾದರೊಂದು ಗೀಳು ಕೆಲವರಿಗೆ ಅಂಟಿಕೊಳ್ಳುತ್ತದಲ್ಲ. ಅದು ನನಗೂ ಹತ್ತಿತು.